ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1206 (1264)
2	ಸದಸ್ಯರ ಹೆಸರು	:	ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
3	ಉತ್ತರಿಸುವ ದಿನಾಂಕ	:	24.12.2021
4	ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ,ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ 2016-17 ರಿಂದ 2020-21 ರವರೆಗೆ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ, ಪ್ರತಿಯೊಂದು ವರ್ಷದಲ್ಲೂ ಮಾನ್ಯ ಶಾಸಕರುಗಳು ಸೂಚಿಸಿರುವ ರೂ.2.00 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆಯೇ; (ಪ್ರತಿ ವರ್ಷದ ಅನುದಾನದ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)	ಹೌದು 2016-17ನೇ ಸಾಲಿನಿಂದ ರಿಂದ 2019-20ನೇ ಸಾಲಿನವರೆಗೆ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ, ಪ್ರತಿಯೊಂದು ವರ್ಷದಲ್ಲೂ ಮಾನ್ಯ ಶಾಸಕರುಗಳು ಸೂಚಿಸಿರುವ ರೂ.2.00 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆ, ಆದರೆ, 2020-21ನೇ ಸಾಲಿನಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿ ಅನುದಾನವನ್ನು ಒದಗಿಸಲಾಗಿದ್ದು ಸದರಿ ವಿವರಗಳು ಈ ಕೆಳಕಂಡಂತಿದೆ:- (ರೂ.ಕೋಟಿಗಳಲ್ಲಿ) ವರ್ಷ — ಒದಗಿಸಿರುವ ಅನುದಾನ (ಪ್ರತಿಕ್ಷೇತ್ರಕ್ಕೆ) 2016-17 — 2.00 2017-18 — 2.00 2018-19 — 2.00 2019-20 — 2.00 2020-21 — 1.00
ಆ)	ಒದಗಿಸಿರದಿದ್ದಲ್ಲಿ, 2016-17 ರಿಂದ 2020-21ರವರೆಗೆ ಯಾವ ವರ್ಷಗಳಲ್ಲಿ ಎಷ್ಟು ಅನುದಾನವನ್ನು ಕಡಿತಗೊಳಿಸಿ ಆದೇಶಿಸಲಾಗಿದೆ; (ವರ್ಷವಾರು ಅನುದಾನ ಕಡತ ಮಾಡಿರುವ ಆದೇಶಗಳ ಪ್ರತಿ ಒದಗಿಸುವುದು)	2020-21ನೇ ಸಾಲಿನಲ್ಲಿ ಕೋವಿಡ್-19ರ ಹಿನ್ನೆಲೆಯಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿ ಅನುದಾನವನ್ನುಆರ್ಥಿಕ ಇಲಾಖೆಯ ಹಿಂಬರಹದಂತೆ ಕಡಿತಗೊಳಿಸಲಾಗಿರುವುದನ್ನು ಹೊರತುಪಡಿಸಿ, ಇನ್ನುಳಿದ ಯಾವುದೇ ವರ್ಷಗಳಲ್ಲಿ ಅನುದಾನವನ್ನು ಕಡಿತಗೊಳಿಸಲಾಗಿಲ್ಲ. (ದಿನಾಂಕ:13.08.2021ರ ಸುತ್ತೋಲೆಯನ್ನು ಇದರೊಂದಿಗೆ ಲಗತ್ತಿಸಿದೆ).

...2

	ಪ್ರಶ್ನೆ	ಉತ್ತರ
ಇ)	2016-17 ರಿಂದ 2020-2021ರವರೆಗೆ ಯಾವ ಆರ್ಥಿಕ ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ನಿಗಧಿಯಾಗಿರುವ ರೂ.2.00 ಕೋಟಿಗಳ ಅನುದಾನವನ್ನು ಸರ್ಕಾರ ಪೂರ್ಣವಾಗಿ ಪ್ರತಿ ವರ್ಷಕ್ಕೆ ಬಿಡುಗಡೆ ಮಾಡದೇ, ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಇರುವ ಅನುದಾನವನ್ನು ಬಳಸಿಕೊಂಡು ಮಾನ್ಯ ಶಾಸಕರುಗಳ ಸೂಚಿಸಿರುವ ರೂ.2.00 ಕೋಟಿಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ;	2018-19ನೇ ಸಾಲಿನಲ್ಲಿ ಬಂಡವಾಳ ವೆಚ್ಚದಡಿ ರೂ.127.69 ಕೋಟಿಗಳು ಬಿಡುಗಡೆಯಾಗಬೇಕಾಗಿದ್ದು, ಸದರಿ ಅನುದಾನವನ್ನು ಪೂರಕ ಅಂದಾಜಿನಲ್ಲಿ ಆರ್ಥಿಕ ಇಲಾಖೆಯು ಒದಗಿಸಿದ್ದು, ಈ ಅನುದಾನವನ್ನು ಡಿಸೆಂಬರ್-2021ರ ನಂತರ ಬಿಡುಗಡೆ ಮಾಡಲಾಗುವುದು. 2019-20ನೇ ಸಾಲಿನಲ್ಲಿ 17 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಪಿ. ಡಿ. ಖಾತೆಯಲ್ಲಿ ಲಭ್ಯವಿದ್ದ ಅನುದಾನದಲ್ಲಿ ಶೇ. 75 ರಷ್ಟು ವೆಚ್ಚವಾಗದ ಕಾರಣ, ಬಂಡವಾಳ ವೆಚ್ಚದಡಿಯಲ್ಲಿ ಎರಡನೆಯ ಕಂತಿನ ಅನುದಾನ ಬಿಡುಗಡೆಯಾಗ ಬೇಕಾಗಿದ್ದು, ಲಭ್ಯವಿರುವ ಅನುದಾನದಲ್ಲಿ ಶೇ. 75 ರಷ್ಟು ವೆಚ್ಚವಾದ ನಂತರ ಬಿಡುಗಡೆ ಮಾಡಲಾಗುವುದು. 2020-21ನೇ ಸಾಲಿನಲ್ಲಿ ಕೋವಿಡ್-19ರ ಕಾರಣದಿಂದ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ ಅನುದಾನವನ್ನು ರೂ. 1.00 ಕೋಟಿಗಳಿಗೆ ಮಿತಿಗೊಳಿಸಲಾಗಿರುತ್ತದೆ ಹಾಗೂ 2020-21ನೇ ಸಾಲಿನ ಅನುದಾನದಲ್ಲಿ ಪ್ರತಿ ಕ್ಷೇತ್ರದಿಂದ ರೂ. 1.00 ಕೋಟಿಗಳನ್ನು ವರ್ಗಾಯಿಸಿ, 2019-20ನೇ ಸಾಲಿಗೆ ಬಳಕೆ ಮಾಡಲು ದಿನಾಂಕ:13.08.2021 ಸುತ್ತೋಲೆಯಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ(ಪ್ರತಿ ಲಗತ್ತಿಸಿದೆ). 2021-22ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದ್ದು, ಮೂರನೇ ಕಂತಿನ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಲಾಗಿದ್ದು, ಪ್ರಸಕ್ತ ಮಾಹೆಯಲ್ಲಿ ಬಿಡುಗಡೆ ಮಾಡಲಾಗುತ್ತದೆ. ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನ ಹಾಗೂ 3ನೇ ಕಂತಿನ ಅನುದಾನ ಸೇರಿ ಒಟ್ಟು ಅನುದಾನದಲ್ಲಿ ಶೇ.75 ರಷ್ಟು ವೆಚ್ಚವಾದಲ್ಲಿ, ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದು.
ಈ)	ಸದರಿ ಸಾಲಿನಲ್ಲಿ, ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ಬಾಕಿ ಇದ್ದ ಅನುದಾನವೆಷ್ಟು; ಬಳಸಿಕೊಂಡಿರುವ ಅನುದಾನವೆಷ್ಟು: (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)	ಸದರಿ ಸಾಲಿನಲ್ಲಿ, ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ಬಾಕಿ ಇದ್ದ ಅನುದಾನ ಹಾಗೂ ಬಳಸಿಕೊಂಡಿರುವ ಅನುದಾನದ ವಿವರಗಳನ್ನು ಜಿಲ್ಲಾವಾರು, ವರ್ಷವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಪಿಡಿಎಸ್ 149 ಕೆಎಲ್ಎಸ್ 2021

(ಮುನಿರತ್ನ)
ಮಾನ್ಯ ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ
ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/82/ ಕೆಎಲ್ಎಸ್/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13.08.2021

ಸುತ್ತೋಲೆ

ದಿನಾಂಕ:03.08.2021ರಂದು ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್-ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ (KLLADS) ಪೂರ್ಣ ಅನುದಾನ ಬಿಡುಗಡೆ ಮಾಡುವುದು ಹಾಗೂ 2021-22ನೇ ಸಾಲಿಗೆ ರೂ.1.00 ಕೋಟಿ ಬದಲು ರೂ.2.00 ಕೋಟಿಗಳ ಅನುದಾನವನ್ನು ಮಂಜೂರು ಮಾಡುವ ಬಗ್ಗೆ ಮತ್ತು ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನೊಳಗೊಂಡ ಕ್ರಿಯಾ ಯೋಜನೆ ರೂಪಿಸಿ, ಅನುಷ್ಠಾನಗೊಳಿಸುವುದು ಹಾಗೂ ಎರಡು ವರ್ಷಕ್ಕಿಂತ ಅವಧಿ ಮೀರಿದ ಕಾಮಗಾರಿಗಳ ಅನುದಾನವನ್ನು ಸರ್ಕಾರಕ್ಕೆ ಎಂಪಿಲ್ಯಾಡ್ಸ್ ಮಾದರಿಯಲ್ಲಿ ಅಧ್ಯರ್ಪಣೆ ಮಾಡುವ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು ಹಾಗೂ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ನಿರ್ಧರಿಸಲಾಯಿತು ಈ ಕುರಿತು ಆರ್ಥಿಕ ಇಲಾಖೆಯು ದಿನಾಂಕ:09.08.2021ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹದಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು /ಉಪ ವಿಭಾಗಾಧಿಕಾರಿಗಳು ಸೂಕ್ತ ಕ್ರಮವಹಿಸಿಲು ತಿಳಿಸಲಾಗಿದೆ.

1. 2021-22ನೇ ಸಾಲಿಗೆ ರೂ.2.00 ಕೋಟಿಗಳಿಗೆ ಕ್ರಿಯಾಯೋಜನೆ ತಯಾರಿಸಲು ಸಹಮತಿ ನೀಡಿದೆ. ಆದ್ದರಿಂದ ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳು ರೂ.2.00ಕೋಟಿಗಳಿಗೆ ಕ್ರಿಯಾಯೋಜನೆ ರೂಪಿಸಿ ಅನುಮೋದನೆ ನೀಡುವುದು.
2. KLLADS ಮಾರ್ಗಸೂಚಿಗಳ ಕಂಡಿಕೆ 3.2 ರ ಅನುಸಾರ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಅಂತಿಮಗೊಳಿಸತಕ್ಕದ್ದು. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಸರ್ಕಾರದಿಂದ ಜಿಲ್ಲೆಗೆ ಒಟ್ಟಾರೆ ಬಿಡುಗಡೆಯಾಗಿರುವ/ಬಿಡುಗಡೆಯಾಗುವ **(ಶಾಸಕರುವಾರು ಬಿಡುಗಡೆಯಾಗುವುದಿಲ್ಲ)** ಅನುದಾನದಲ್ಲಿ ಭರಿಸತಕ್ಕದ್ದು.
3. ಇನ್ನೂ ಮುಂದೆ ಯೋಜನಾ ಇಲಾಖೆಯು ಅನುದಾನವನ್ನು ಕ್ಷೇತ್ರವಾರು ಬಿಡುಗಡೆ ಮಾಡುವ ಬದಲಾಗಿ ಜಿಲ್ಲಾವಾರು ಬಿಡುಗಡೆ ಮಾಡಲು ಕ್ರಮವಹಿಸುತ್ತದೆ. ಆದ್ದರಿಂದ ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿ ಲಭ್ಯವಿರುವ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ರೂ.2.00ಕೋಟಿಗಳ ಮಿತಿಯಲ್ಲಿ ಕಾಮಗಾರಿಗಳ ಪ್ರಗತಿ ಆಧರಿಸಿ ಹಣ ಪಾವತಿಸಲು ಸೂಕ್ತ ಕ್ರಮವಹಿಸುವುದು.
4. 2020-21ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು. ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಯನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ಕಾಮಗಾರಿಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವುದು.

5. 2018-19ನೇ ಸಾಲಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೆ ಬಿಡುಗಡೆಗೆ ಬಾಕಿ ಇರುವ (ರೂ.127.69 ಕೋಟಿಗಳನ್ನು) ನಾಲ್ಕನೇ ಕಂತಿನ ಬಂಡವಾಳ ವೆಚ್ಚದ ಅನುದಾನವನ್ನು ಬಿಡುಗಡೆಗೊಳಿಸಲು ಪ್ರಸ್ತುತ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿದ ನಂತರ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
6. KLLADS ಮಾರ್ಗಸೂಚಿ ಪ್ಯಾರ 4.1 ರಂತೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪ್ರಾರಂಭವಾಗದೇ ಉಳಿದಿರುವ ಕಾಮಗಾರಿಯ ಅನುದಾನವನ್ನು ಕೂಡಲೇ ರಾಜ್ಯ ಮಟ್ಟದ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆಗೊಳಿಸತಕ್ಕದ್ದು.

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು,
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಪ್ರದೇಶಾಭಿವೃದ್ಧಿ, ಮಂಡಳಿ ವಿಭಾಗ,
ಯೋಜನೆ ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ವಿಧಾನ ಸಭೆ / ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ.
5. ಮಾನ್ಯ ಯೋಜನಾ ಸಚಿವರ ಪ್ರಧಾನ ಕಾರ್ಯದರ್ಶಿಯವರು.
6. ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಯೋಜನಾ ಇಲಾಖೆ.
11. ಶಾಖಾಧಿಕಾರಿ, ಸ್ಕೀಮರ ಶಾಖೆ, ಯೋಜನಾ ಇಲಾಖೆ (ಕಾಂಪೆಂಡಿಯಮ್‌ಗೋಸ್ಕರ).
12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು. / ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ವೆಬ್‌ಸೈಟ್‌ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1206(1264)ರ ಅನುಬಂಧ

(ರೂ. ಲಕ್ಷಗಳಲ್ಲಿ.)

2016-17ನೇ ಸಾಲಿನಿಂದ 2021-22ನೇ ಸಾಲಿನವರೆವಿಗೂ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿರುವ ಅನುದಾನದ ವಿವರ

ಸಂ.	ಜಿಲ್ಲೆಯ ಹೆಸರು	2016-17		2017-18		2018-19		2019-20		2020-21	
		ಪಿ.ಡಿ ಖಾತೆಯಲ್ಲಿದ್ದ ಅನುದಾನ	ಮಾರ್ಚ್-2017ರ ಅಂತ್ಯಕ್ಕೆ ಭರಿಸಲಾದ ವೆಚ್ಚ	ಪಿ.ಡಿ ಖಾತೆಯಲ್ಲಿದ್ದ ಅನುದಾನ	ಮಾರ್ಚ್-2018ರ ಅಂತ್ಯಕ್ಕೆ ಭರಿಸಲಾದ ವೆಚ್ಚ	ಪಿ.ಡಿ ಖಾತೆಯಲ್ಲಿದ್ದ ಅನುದಾನ	ಮಾರ್ಚ್-2019ರ ಅಂತ್ಯಕ್ಕೆ ಭರಿಸಲಾದ ವೆಚ್ಚ	ಪಿ.ಡಿ ಖಾತೆಯಲ್ಲಿದ್ದ ಅನುದಾನ	ಮಾರ್ಚ್-2020ರ ಅಂತ್ಯಕ್ಕೆ ಭರಿಸಲಾದ ವೆಚ್ಚ	ಪಿ.ಡಿ ಖಾತೆಯಲ್ಲಿದ್ದ ಅನುದಾನ	ಮಾರ್ಚ್-2021ರ ಅಂತ್ಯಕ್ಕೆ ಭರಿಸಲಾದ ವೆಚ್ಚ
1	2	3	4	5	6	7	8	9	10	11	12
1	ಬೀದರ್	2968.28	1294.455	2692.65	995.5275	2803.70	1217.94	1429.67	2038.15	1980.72	1511.95
2	ಬಳ್ಳಾರಿ	4098.38	4501.61	3656.1	2605.15	3274.87	1923.89	3138.23	993.72	3450.48	2087.75
3	ಚಿತ್ರದುರ್ಗ	3218.23	121.42	3125.99	9.05	3455.30	1102.41	2065.67	1702.61	2204.59	1187.88
4	ದಾವಣಗೆರೆ	138.53	1348.13	149.03	1500	1831.30	1916.82	843.78	1526.10	1024.38	1344.66
5	ಕಲಬುರಗಿ	5789.18	368.84	5959.7	119.84	5588.61	2002.90	4869.78	1572.90	5495.47	1381.57
6	ಯಾದಗಿರಿ	1545.64	44.45	1686.63	298.5	1975.08	286.47	2547.40	626.12	2288.37	933.78
7	ರಾಯಚೂರು	2145.46	1636.4	2909.06	662.74	3767.32	1089.80	2357.95	1716.45	1880.92	1782.10
8	ಕೊಪ್ಪಳ	2111.03	1061.84	2158.96	1249.57	808.48	1809.03	1348.80	790.29	1755.71	539.02
9	ಕೋಲಾರ	3017.31	2090.81	2326.5	1558.08	2392.14	1235.81	2520.22	1489.62	3136.36	1188.26
10	ಚಿಕ್ಕಬಳ್ಳಾಪುರ	1379.99	1311	1268.99	1469.02	1170.41	841.68	1760.60	827.37	1962.57	848.03
11	ತುಮಕೂರು	7471.66	4617.26	7957.98	4216.26	3013.53	2461.33	2612.97	3536.11	2550.73	2182.70
12	ರಾಮನಗರ	2386	669.91	1716.08	357.22	1358.87	1097.15	1099.19	566.59	1602.42	504.27
13	ಬೆಂಗಳೂರು ನಗರ	9787.99325	7922.23	10841.1333	7655.94	11056.48	8889.86	7978.86	5617.74	10426.11	5502.74
14	ಬೆಂಗಳೂರು ಗ್ರಾಮೀಣ	1454.39	1323.03	1058.84	1583.57	1051.24	824.88	1488.42	904.63	1108.49	1579.93
15	ಮೈಸೂರು	3894.8903	2610.8	4384.0903	2311.21	5612.43	2078.18	4502.87	2090.91	5834.46	1515.85
16	ಮಂಡ್ಯ	3359.73	146.49	2977.14	169.48	2163.70	912.57	2468.03	925.53	529.65	3738.38
17	ಚಾಮರಾಜನಗರ	1704.09	566.88	1937.21	524.69	1655.62	431.32	1309.97	623.68	797.46	1299.91
18	ಕೊಡಗು	943.24	899.05	675.28	844.34	874.87	447.89	919.23	985.50	965.36	753.87
19	ದಕ್ಷಿಣ ಕನ್ನಡ	4375.14	1840.78	4534.36	2763.21	2061.71	1433.16	1824.55	2098.46	2518.80	1423.65
20	ಉಡುಪಿ	1855.16	1408.49	1846.67	1970.59	1577.32	996.58	2002.62	2042.15	1306.68	1845.11
21	ಶಿವಮೊಗ್ಗ	4231.71	2911.42	3745.249	3026.81	3706.54	1841.86	2900.04	1578.31	3358.91	1604.64
22	ಧಾರವಾಡ	2669.57	6919.48	3258.24	1666.22	3974.46	1168.71	2780.45	1764.15	3112.54	1467.62
23	ಹಾವೇರಿ	1369.6015	3424.558	1955.1215	1425.3577	2689.45	985.85	2349.48	952.51	2584.65	1347.66
24	ವಿಜಯಪುರ	3267.12	1541.47	3594.505	2233.12	4407.91	495.59	2235.52	1213.94	2733.51	1627.52
25	ಬಾಗಲಕೋಟೆ	2984.59	1428.28	2412.87	1740.19	2592.91	838.80	1745.20	1470.21	2011.17	1904.82
26	ಚಿಕ್ಕಮಗಳೂರು	25.453	1281.8413	42.8829	1281.8413	2129.94	822.26	1007.01	1635.15	1121.72	1352.39
27	ಉತ್ತರ ಕನ್ನಡ	3615.5128	1218.3637	4505.4791	1823.561	3176.72	591.88	3466.84	574.34	3244.90	1622.41
28	ಗದಗ	2893.925	651.09	3221.7125	846.82025	2654.11	784.46	1512.31	879.56	1540.83	597.64
29	ಬೆಳಗಾವಿ	8377.33	3886.36	7711.58	5688.88	15161.53	1071.69	5782.85	10579.85	5676.96	2481.92
30	ಹಾಸನ	921.66	128.24	1595.22	1698.35	1296.87	923.93	858.82	2332.61	968.96	1489.86
	Total	**94000.79585**	**59174.978**	**95905.2536**	**54295.13775**	**96479.69**	**42524.68**	**73727.33**	**55655.26**	**79173.89**	**48647.86**

ದ ವೆಚ್ಚವು ಆರಂಭಿಕ ಶಿಲ್ಕುವನ್ನು ಒಳಗೊಂಡಿದೆ.